# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 633/2015 ಸಿಡಬ್ಲೂ: 4 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 14-11-2024

ಹೆಸರು : ರಾಜಶ್ರೀ

ಗಂಡ ಹೆಸರು : ರಾಜು

ವಯಸ್ಸು : 30 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಆರೋಪಿ ನನಗೆ ಪರಿಚಯ. ಚಾ ಸಾ 1 ರವರು ನನ್ನ ಗಂಡ. ಚಾ ಸಾ 5 ರಿಂದ 7 ರವರು ನನಗೆ ಪರಿಚಯ. ಚಾಸಾ 2 ಮತ್ತು 3 ರವರು ನನ್ನ ಮನೆಯ ಪಕ್ಕದವರು. ಸುಮಾರು 10 ವರ್ಷಗಳ ಹಿಂದೆ ರಾತ್ರಿ 10.30 ಗಂಟೆಗೆ ಚಾ ಸಾ1 ಮತ್ತು ಆರೋಪಿಯ ನಡುವೆ ಜಗಳ ಆಗಿರುತ್ತದೆ. ಆರೋಪಿತನು ಹಾಗೂ ಆತನ ಹೆಂಡತಿ ಜಗಳ ಮಾಡುತ್ತಿರುವಾಗ ನನ್ನ ಗಂಡನಾದ ಚಾ ಸಾ 1 ರವರು ಬಿಡಿಸಲು ಹೋದಾಗ ಆರೋಪಿತನು ನೀನ್ಯಾರು ರಂಡಿ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿದ್ದನು. ಅದೇರೀತಿ ಆರೋಪಿತನು ಒಂದು ಹಿಡಿಗಾತ್ರದ ಕಲ್ಲಿನಿಂದ ಹೊಡೆ ಬಡೆ ಮಾಡಿದಾಗ ಚಾ ಸಾ 1 ರವರಿಗೆ ರಕ್ತಾಗಾಯ ಆಗಿ ಹಣೆಗೆ ಟಾಕಿ ಬಿದಿದ್ದು, ಜಗಳ ಸಮಯದಲ್ಲಿ ಯಾರು ಇರಲಿಲ್ಲ ಹಾಗೂ ಯಾರು ಬಂದು ಜಗಳ ಬಿಡಿಸಿಲ್ಲ. ಆಗ ನಾನು ಒಬಾಕಿನೆ ಇದ್ದೆನು. ನಂತರ ನಾನು ಆಸ್ಪತ್ರೆಗೆ ಹೋಗಿ ಪೋಲೀಸರಿಗೆ ತಿಳಿಸಿರುತ್ತೇನೆ. ಸಾಕ್ಷಿಗೆ ಒಂದು ಹಿಡಿ ಗಾತ್ರದ ಕಲ್ಲನ್ನು ತೋರಿಸಲಾಗಿ ಸಾಕ್ಷಿಯು ಸದರಿ ಕಲ್ಲನು ನೋಡಿ ಗುರುತಿಸುತ್ತಾರೆ ಅದನ್ನು ಈಗಾಗಲೆ ಮು ಮಾ 1 ಎಂದು ಗುರುತಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ವಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ ಃ

ದಿ ಃ 26-06-2015 ರಂದು ರಾತ್ರಿ 10.30 ಗಂಟೆಗೆ ಚಾಸಾ 1 ರವರು ಮನೆಯಲ್ಲಿ ಊಟ ಮಾಡುತ್ತಿರುವಾಗ ಆರೋಪಿತನು ಹಾಗೂ ಆತನ ಮಾವ ಜಗಳ ಮಾಡುತ್ತಿದ್ದರು ಎಂದರೆ ಸರಿ. ಆಗ ಚಾಸ ಾ ಡ1 ರವರು ಸದರಿ ಜಗಳವನ್ನು ಬಿಡಿಸಲು ಹೋದಾಗ ಆರೋಪಿತನು ಅವರಿಗೆ ಹೊಡೆ ಬಡೆ ಮಾಡಿ ಅವಾಚ್ಯ ಶಬ್ದಗಳಿಂದ

ಬೈದಿರುತ್ತಾರೆ ಎಂದರೆ ಸರಿ.   ಆಗ ಸದರಿ ಚಾ ಸಾ 5 ರಿಂದ 7 ರವರು ಬಂದು ಸದರಿ ಜಗಳವನ್ನು ಬಿಡಿಸಿರುತ್ತಾರೆ ಎಂದರೆ ಸರಿ. ನಂತರ ಆರೋಪಿತನು ನನಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂರದೆ ಸರಿ.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದ ಃ

ನಾನು ಉಂಗುರ ಮಾರಲು ಬೆಳಿಗ್ಗೆ 10.30 ಯಿಂದ ಸಾಯಂಕಾಲ 05-00 ಗಂಟೆಯ ವರೆಗೆ ಬೇರೆ ಬೇರೆ ಊರಿಗೆ ಹೋಗಿರುತ್ತೇನೆ. ಸೇಡಂ ನಿಂದ ಮಳಖೇಡ್ ಗೆ ಹೋಗಲು ಅರ್ಧ ಗಂಟೆ ಸಮಯ ಬೇಕಾಗಿರುತ್ತದೆ. ಆರೋಪಿತನು ನನ್ನ ಬೀಗರು. ಸದರಿ ಜಗಳ ಆಗುತ್ತಿರುವಾಗ ನಾನು ಮನೆಯಲ್ಲಿದ್ದೆ. ನಾನು ಮನೆಯಲ್ಲಿ ಅಡುಗೆ ಮಾಡುತ್ತಿರುವುದರಿಂದ ಆರೋಪಿತನ ಮನೆಯಲ್ಲಿ ಏನು ಆಗಿದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ಚಾ ಸಾ 1 ರವರು ಸಹ ಉಂಗುರ ಮಾರಾಟ ಮಾಡುತ್ತಾರೆ ಅವರೂ ಸಹ ಬೇರೆ ಬೇರೆ ಊರಿಗೆ ಹೋಗಿ ಮಾರಾಟ ಮಾಡುತ್ತಾರೆ. ನಾವಿಬ್ಬರಟೂ ಒಟ್ಟಿಗೆ ಹೋಗಿ ಒಟ್ಟಿಗೆ ಬರುವುದಿಲ್ಲ ಎಂದರೆ ಸರಿ. ಜಗಳ ಆಗುವ ಸಮಯದಲ್ಲಿ ಯಾರೂ ಬೇರೆ ಇರಲಿಲ್ಲ. ಆರೋಪಿತನು ಸರಿಯಾಗಿ ಜೀವನ ಮಾಡುತ್ತಿದ್ದಾನೆ ಎಂದು ನೋಡಿ ಆತನ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**